ensure total public health throughout the State. That is the reason for opening more and more Medical Colleges so that instead of villagers coming to us, doctors should go to the villagers.

SRI B. B. SAYANAK.—Sir, the Junior Doctors and Medicos have started an agitation demanding for abolition of capitation fee. I would like to know from the Hon'ble Minister for Health, whether it is a fact that the Central Government has directed the State Government not to charge the capitation fee ?

SRI A. K. ABDUL SAMAD.—We have received the information from the Indian Medical Council and also from the Union Government expressing their opinion against the charging of this capitation fee. But, this has nothing to do with the Junior Doctors, who are likely to be doctors shortly.

SRI K. B. SHIVAIAH.—Socially, Economically weaker sections of the Society ಇಂಥಾ ಮಕ್ಕಳಿಗೆ, ಅವರ ತಂದೆತಾಯಿಗಳ ಆದಾಯ ಯಾರಿಗೆ ೪೮೦೦ ರೂಪಾಯಿ ಆದಾಯ ಒಳಗೆ ಇದೆಯೋ ಅಂಥಾ ಮಕ್ಕಳಿಗೆ ಕ್ಯಾಪಿಟೇಷನ್ ಫೀಸ್ ಅನ್ನು ಸರ್ಕಾರವೇ ಸಬ್ಸಿಡೈಸ್ ಮಾಡಿ, ಅವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಸರ್ಕಾರ ಸಿದ್ಧವಿದೆಯೇ ಎಂದು ಕೇಳುತ್ತೇನೆ Are you prepared to pay the capitation fee on behalf of those students from the government exchequer ?

SRI A. K. ABDUL SAMAD.—These private Medical Colleges, who charge capitation fee, we have reserved certain percentage of seats to be admitted without charging capitation fee. In the existing medical colleges, 65% of the seats are given free without charging any capitation fee and even in rest of the 35% seats certain categories are there by which the students from backward class, Scheduled Castes/Scheduled Tribes and Minorities do get their place in them.

ಪ್ರಶ್ನೆ ೧೪೪ (೨೮೬) ಶ್ರೀ ಎಂ. ಸಿ. ಬಸಪ್ಪ (ಹಾಜರಿಲ್ಲ)

Nomination of Member to Land Development Banks and Co-operative Societies.

359. SRI D. T. MAYANNA (Huliyurdurga).—Will the Minister for Co-operation, be pleased to state :—

(a) the procedure adopted by the Government while nominating its members to the Karnataka Land Development Banks and Co-operative Societies ;

(b) whether such Government nominated members will have voting rights ?

SRI H. C. SRIKANTAIAH (Minister for Co-operation).—

(a) While nominating to the administrative boards of the co-operative societies Government will consider the following facts :

1. Whether is there any share capital of the Government or any other Government aid in the co-operative societies ; and,
2. Whether the persons to be nominated by the Government are eligible to become the members of the administrative boards as per the Karnataka Co-operative Societies Act.

(b) Yes.

ಶ್ರೀ ಡಿ. ಟಿ. ಮಾಯಣ್ಣ.— ಸ್ವಾಮಿ, ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ಸಹಕಾರ ಸಂಘಗಳ ಆಡಳಿತ ಮಂಡಲಿಗಳಿಗೆ ನಾಮಕರಣ ಮಾಡುವಾಗ ಸರ್ಕಾರವು (೧) ಸಹಕಾರಿ ಸಂಘದಲ್ಲಿ ಸರ್ಕಾರದ ಷೇರು ಬಂಡವಾಳ ಅಥವಾ ಇತರ ಯಾವುದೇ ರೀತಿಯ ಧನ ಸಹಾಯ ಇದೆಯೇ ? ಮತ್ತು (೨) ನಾಮಕರಣ ಮಾಡಲ್ಪಡುವ ಸದಸ್ಯರು ಸಹಕಾರ ಸಂಘಗಳ ಕಾಯಿದೆಯ ಪ್ರಕಾರ ಆಡಳಿತ ಮಂಡಲಿಯ ಸದಸ್ಯರಾಗಲು ಅರ್ಹರಿದ್ದಾರೆಯೇ ಎಂಬ ಅಂಶಗಳನ್ನು ಪರಿಶೀಲಿಸುತ್ತದೆ ಅಂತ ಹೇಳಿದ್ದೀರಿ. ನಾನು ಈ ಬಗ್ಗೆ ಕೇಳುವುದಾದರೂ ಇಷ್ಟೆ. ಈ ರೀತಿ ನಾಮಕರಣ ಮಾಡುವಾಗ ಎಷ್ಟು ಜನರು ಎಷ್ಟು ಷೇರು ಬಂಡವಾಳ ಹಾಕಿರುತ್ತಾರೋ ಅಷ್ಟು ಜನರನ್ನೂ ನಾಮಿನೇಟ್ ಮಾಡುತ್ತೀರಾ ಇಲ್ಲವೇ ಒಂದೊಂದು ಸಹಕಾರ ಸಂಘಕ್ಕೆ ಒಂದೊಂದು ನೀತಿ ಅಥವಾ ನಿಲುವು ಏನಾದರೂ ಇದೆಯೇ ?

† ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಒಂದು ಬೋರ್ಡ್‌ಗೆ ಮೂರನೇ ಒಂದು ಭಾಗ ನಾಮಕರಣ ಮಾಡುತ್ತೇವೆ ಅಷ್ಟೆ. ಬೇರೆ ಯಾವ ನಿಲುವೂ ಇಲ್ಲ.

ಶ್ರೀ ಡಿ. ಟಿ. ಮಾಯಣ್ಣ.—ಇಲ್ಲಿ ತಾವು ಷೇರು ಬಂಡವಾಳ ಅಂತ ಹೇಳಿದ್ದೀರಲ್ಲಾ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈ ರೀತಿ ನಾಮಕರಣ ಮಾಡುವುದಕ್ಕೆ ಏನು ಆಧಾರ ಎಂದರೆ ಷೇರು ಬಂಡವಾಳ ಇರಬೇಕು. ಆಲ್ಲದೆ ಸರ್ಕಾರದವರು ಯಾವುದಾದರೂ ಸೊಸೈಟಿಗೆ ಏನಾದರೂ ಧನ ಸಹಾಯ ಕೊಟ್ಟಿದ್ದರೆ ಆ ಸಹಕಾರ ಸಂಘಗಳಿಗೂ ಕೂಡ ನಾಮಿನೇಟ್ ಮಾಡುತ್ತೇನೆ. ಷೇರು ಬಂಡವಾಳ ಇದ್ದರೆ ಆ ಸೊಸೈಟಿಯಲ್ಲಿ ಇದ್ದರೆ ಅಂಥಾವರು ಅಲ್ಲಿಗೆ ನಾಮಕರಣ ಮಾಡತಕ್ಕಂಥಾ ಹಕ್ಕನ್ನು ಹೊಂದಿರುತ್ತಾರೆ.

ಶ್ರೀ ಡಿ. ಟಿ. ಮಾಯಣ್ಣ.—ಸ್ವಾಮಿ, ಈ ಪ್ರಜಾಪ್ರಭುತ್ವದಲ್ಲಿ ಏನಾಗಿದೆ ಎಂಡರೆ ಒಂದೊಂದು ಸೊಸೈಟಿಯಲ್ಲಿ ೧೨ ಜನ ಇದ್ದರೆ ಅಲ್ಲಿಗೆ ೪-೫ ಜನರನ್ನು ನಾಮಿನೇಟ್ ಮಾಡುತ್ತಾರೆ, ಅರ್ಧಭಾಗ ವನ್ನೇ ಕೆಲವು ಕಡೆ ನಾಮಿನೇಟ್ ಮಾಡುತ್ತಾರೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದು ಹಾಗಲ್ಲ. ೯ ಜನ ಇದ್ದರೆ ಅದರಲ್ಲಿ ೩ ಜನರನ್ನು ನಾಮಿನೇಟ್ ಮಾಡುತ್ತೇವೆ, ೧೨ ಜನ ಇದ್ದರೆ ಅದರಲ್ಲಿ ೫ ಜನರನ್ನು ನಾಮಿನೇಟ್ ಮಾಡುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ.—ಇಲ್ಲ ಸ್ವಾಮಿ, ನಾನು ಹೇಳಿದ ಹಾಗೆಯೇ ಇದೆ. ಈ ಸಹಕಾರ ಸಂಘದ ನೀತಿ ಏನು ಎಂದರೆ ಅವರು ಇದರ ಬಗ್ಗೆ ಶಾಶ್ವತವಾಗಿ ಅಂದೋಳನ ನಡೆಸಿಕೊಂಡು ಚೆನ್ನಾಗಿ ಬೆಳೆಸಿಕೊಂಡು ಬರಬೇಕು. ಇದನ್ನು ಅವರು ಅರ್ಥಮಾಡಿಕೊಳ್ಳಬೇಕು. ಸರ್ಕಾರದವರು ಏನು ಮಾಡುತ್ತಾರೆ ಎಂದರೆ ಯಾರು ಬಲವಾಗಿದ್ದಾರೋ, ಯಾರು ಪ್ರಭಾವಶಾಲಿಗಳಾಗಿದ್ದಾರೋ ಅಂಥಾವರನ್ನು ನಾಮಿನೇಟ್ ಮಾಡುತ್ತಾರೆ, ಇದರಲ್ಲಿ ಯಾರು ಆಂದೋಳನ ನಡೆಸಂತ್ತಾರೋ ಅಂಥಾವರನ್ನು ಮಾಡುವುದಿಲ್ಲ. ಇವರಿಗೆ ಬಲ ಇದ್ದವರನ್ನು ನಾಮಿನೇಟ್ ಮಾಡುವುದರಿಂದ ನಮಗೆ ಬಹಳ ತೊಂದರೆ ಯಾಗುತ್ತದೆ, ಇದನ್ನು ಸರಿಪಡಿಸುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ —ಅವರಿಂದ ತೊಂದರೆಯೂ ಆಗುತ್ತದೆ, ಸಹಾಯವೂ ಆಗುತ್ತದೆ, ಎರಡೂ ಆಗುತ್ತದೆ. ಅಧ್ಯಕ್ಷರೇ, ಸಾಮಾನ್ಯವಾಗಿ ನಾಮಕರಣ ಮಾಡಬೇಕಾದರೆ ಯಾರು ಸಹಕಾರ ಸಂಘಗಳಲ್ಲಿ ನೇರವಾಗಿ ನಿಂತು ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಸಾಧ್ಯವಿಲ್ಲವೋ, ಅಂಥಾ ದುರ್ಬಲ ವರ್ಗದವರಿಗೆ, ಹಿಂದುಳಿದ ವರ್ಗದವರಿಗೆ ಹಾಗೂ ಹರಿಜನ ಗಿರಿಜನರಿಗೆ ಸಹಾಯ ಮಾಡುವುದಕ್ಕೋಸ್ಕರ ಅಂಥಾವರನ್ನು ಅಲ್ಲಿಗೆ ನಾಮಕರಣ ಮಾಡುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು ಈ ಸಹಕಾರ ಸಂಘಗಳಿಗೆ ನಾನ್ ಆಫಿಷಿಯಲ್ಸ್ ಅವರನ್ನು ನಾಮಕರಣ ಮಾಡುವುದನ್ನು ನಿಲ್ಲಿಸುತ್ತೇವೆ ಅಂತ ಒಂದು ಘೋಷಣೆ ಮಾಡಿದ್ದಾರೆ. ಅಲ್ಲದೆ ಈ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ ನಾಮಿನೇಷನ್ ಮಾಡತಕ್ಕಂಥಾದ್ದನ್ನೂ ಕೂಡ ಮಾಡಕೂಡದು ಅಂತ ಒಂದು ಆಜ್ಞೆ ಮಾಡಿದ್ದಾರೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾನೂ ಕೂಡ ಒಂದರಲ್ಲಿ ಮೆಂಬರ್ ಆಗಿದ್ದೆ. ಮಧ್ಯದಲ್ಲಿ ಅವರಿಂದ ಈ ರೀತಿ ಒಂದು ಪತ್ರ ಬಂದಿದೆ, ನಾಮಿನೇಷನ್ ಮಾಡತಕ್ಕಂಥಾದ್ದರ ಬಗ್ಗೆ ಸರ್ಕಾರ ಈ ರೀತಿ ಒಂದು ನಿಲುವು ತೆಗೆದುಕೊಂಡಿದೆ, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ ಆದರೆ ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ಈ ರೀತಿ ನಾಮಿನೇಷನ್ ಮಾಡಕೂಡದು ಅಂತ ನಿಲುವು ತೆಗೆದುಕೊಂಡಿದೆ ಅಂತ ಬಂದಿದೆ. ಆದುದರಿಂದ ನಾನು ಕೇಳುವುದೇನೆಂದರೆ, ಈಗ ಇದನ್ನು ನಿಲ್ಲಿಸಿದ್ದೀರಾ, ಇದು ಮುಂದುವರೆದುಕೊಂಡು ಹೋಗುತ್ತಿದೆಯೇ ಅನ್ನುವುದನ್ನು ತಾವು ತಿಳಿಸಬೇಕು.

ಎರಡನೆಯದಾಗಿ ಇಲ್ಲಿಯವರೆಗೆ ದುರ್ಬಲ ವರ್ಗದವರಿಗೆ, ಹಿಂದುಳಿದ ವರ್ಗದವರಿಗೆ ಹಾಗೂ ಹರಿಜನ ಗಿರಿಜನರಿಗೆ ಇದರ ಬಗ್ಗೆ ಏನು ನಿಲುವು ತೆಗೆದುಕೊಂಡಿದ್ದೀರಿ ? ಆದರಂತೆ ಕಟ್ಟುನಿಟ್ಟಾಗಿ ಪಾಲಿಸುತ್ತೀರಾ ? ಇಲ್ಲದೇ ಹೋದರೆ ಈ ಸಹಕಾರೀ ಸಂಘಗಳಲ್ಲಿ ದುರ್ಬಲ ವರ್ಗದವರಿಗೆ, ಹಿಂದುಳಿದವರಿಗೆ ಹಾಗೂ ಹರಿಜನ ಗಿರಿಜನರಿಗೆ ಆ ಸ್ಥಾನಗಳನ್ನು ಮೀಸಲಾಗಿಟ್ಟರೆ ಅವರೇ ಬರುವುದಕ್ಕೆ ಅನುಕೂಲವಾಗುತ್ತದೆ, ಆ ರೀತಿ ಏನಾದರೂ ಮಾಡಿದ್ದೀರಾ ? ಆ ರೀತಿ ಒಂದು ವೇಳೆ ಏನಾದರೂ ಮಾಡಿದರೆ ಅದೇ ಸೌಲಭ್ಯವನ್ನು ಸ್ಮಾಲ್ ಹೋಲ್ಡರ್ಸ್ ಯಾರು ಇರುತ್ತಾರೆ ಅವರಿಗೂ ಅವಕಾಶ ಮಾಡಿಕೊಟ್ಟರೆ ಅದರಿಂದ ಒಳ್ಳೆಯದಾಗುವುದಿಲ್ಲವೇ ? ಸರ್ಕಾರದವರು ಈ ಬಗ್ಗೆ ಒಂದು ನಿಲುವು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮೊದಲು ಸಹಕಾರ ಸಂಘಗಳಲ್ಲಿ ಯಾವ ರೀತಿಯಾಗಿ ದುರ್ಬಲ ವರ್ಗದವರಿಗೆ, ಹಿಂದುಳಿದವರಿಗೆ ಹಾಗೂ ಹರಿಜನ ಗಿರಿಜನರಿಗೆ ನಾಮಕರಣ ಆಗುತ್ತದೆಯೋ ಆದೇ ರೀತಿ ಈಗಲೂ ನಾಮಕರಣವಾಗುತ್ತಾ ಇದೆ. ಈವಾಗ ಇವರ ಬಗ್ಗೆ ಏನು ಒಂದು ಧೋರಣೆ ಇದೆ ಆದೇ ಧೋರಣೆ ಮುಂದುವರೆದಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಸಹಕಾರ ಸಂಘಗಳಲ್ಲಿ ನಾಮಕರಣ ಮಾಡುತ್ತಾ ಇರುವುದು ನಿಂತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಸಹಕಾರ ಸಂಘಗಳಲ್ಲಿ ನಾಮಕರಣ ಮಾಡುವುದನ್ನು ಪರಿಶೀಲಿಸುತ್ತಿದ್ದೇವೆ, ಹಾಗೂ ಸರ್ಕಾರ ಇದರ ಬಗ್ಗೆ ಯೋಚನೆ ಮಾಡುತ್ತಾ ಇದೆ ಹೇಳಿದ್ದಾರೆ ವಿನಾ ಇನ್ನೇನೂ ಹೇಳಿಲ್ಲಾ. ಈಗ ನಾವು ಇದಕ್ಕೊಂದು ಅಮೆಂಡ್‌ಮೆಂಟ್ ಕಮಿಟಿಯನ್ನು ಸರ್ಕಾರ ನೇಮಕ ಮಾಡಿದೆ. ಆದರ ರಿಪೋರ್ಟ್ ಬಂದ ಮೇಲೆ ಯೋಚನೆ ಮಾಡಬೇಕಾಗುತ್ತದೆ. ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ಈಗಲೂ ಕೂಡ ನಾಮಿನೇಷನ್ ಆಗುತ್ತಾ ಇದೆ ; ನಿಂತಿಲ್ಲ.

ಶ್ರೀ ಕೆ. ಬಿ. ಶಿವಯ್ಯ.—ದುರ್ಬಲ ವರ್ಗದವರು, ಹಿಂದುಳಿದ ವರ್ಗದವರು ಹಾಗೂ ಹರಿಜನ ಗಿರಿಜನ ವರ್ಗದವರನ್ನು ಈಗಲೂ ನಾಮಕರಣ ಮಾಡುತ್ತಿದ್ದೇವೆ ಆ ಸಹಕಾರ ಸಂಘಗಳಿಗೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ನಾನು ಹೇಳುವುದೇನೆಂದರೆ ಅದಕ್ಕಿಂತಲೂ ಮುಖ್ಯವಾಗಿ ಯಾರು ಪ್ರಬಲರಾಗಿರುತ್ತಾರೋ ಅಂಥಾವರೇ ಮುಂದುವರೆಯುತ್ತಿದ್ದಾರೆ ಹಾಗೂ ಯಾರು ಚುನಾವಣೆಯಲ್ಲಿ ಸೋತಿದ್ದಾರೋ ಅಂಥಾವರನ್ನೇ ನಾಮಕರಣ ಮಾಡಿದ್ದಾರೆ ಅಧ್ಯಕ್ಷರೇ ? ಇಂಥಾ ನಿದರ್ಶನಗಳು ಇವೆ. ಇವೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಚುನಾವಣೆಯಲ್ಲಿ ಸೋತಿರುವವರನ್ನು ನಾಮಕರಣ ಮಾಡಿರತಕ್ಕಂಥಾ ನಿದರ್ಶನ ಇದುವರೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲಾ. ಅಲ್ಲದೆ ಸೋತವರನ್ನೂ ನಾವು ಇದುವರೆಗೂ ಮಾಡಿಲ್ಲಾ. ಮತ್ತು ಈ ಸೋತವರನ್ನು ಅಲ್ಲಿಗೆ ನಾಮಕರಣ ಮಾಡಬಾರದು ಅನ್ನುವ ಒಂದು ನಿಲುವನ್ನು ಅನುಸರಿಸಿದ್ದೇವೆ ಅಂತ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಡಿ ಟಿ. ಮಾಯಣ್ಣ.—ಮೂರು ವರ್ಷಕ್ಕೆ ಒಂದು ಸಾರಿ ಮೂರನೇ ಒಂದು ಭಾಗದ ಸದಸ್ಯರನ್ನು ನಾಮಕರಣ ಮಾಡಿದರೆ ಇದು ಪ್ರಜಾಪ್ರಭುತ್ವದ ಒಂದು ನೀತಿಯಾಗುತ್ತದೆಯೇ ? ಈ ಸಹಕಾರ ಸಂಘಗಳಲ್ಲಿ ಜನಗಳ ನಿಲುವು ಏನು ಇದರಲ್ಲಿ ಆಂಧೋಲನ ನಡೆಸಿ ಇದನ್ನು ಚೆನ್ನಾಗಿ ಬೆಳೆಸ ಬೇಕು ಎನ್ನುವುದು. ಅದು ಬಿಟ್ಟು ಸರ್ಕಾರದವರು ಇದರ ಒಂದು ಆಡಳಿತವನ್ನು ಈ ಸಹಕಾರಿ ಸಂಘ ಗಳ ಒಂದು ಪಾತ್ರವನ್ನು ತಮ್ಮ ಕೈಯಲ್ಲಿಟ್ಟುಕೊಳ್ಳುವುದಕ್ಕೆ, ಪ್ರಬಲರಾದ ವ್ಯಕ್ತಿಗಳನ್ನು ತೆಗೆದು ಕೊಳ್ಳುವುದಕ್ಕೆ ಹಾಗೂ ಅಲ್ಲಿಗೆ ನಾಮಿನೇಟ್ ಮಾಡುವಂಥಾ ಒಂದು ನಿಲುವನ್ನು ತೆಗೆದುಕೊಂಡಿರುವುದು ನಿಜವೇ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.- ಅದು ಸುಳ್ಳು. ಹಾಗಲ್ಲ. ನಮ್ಮ ಹಣವನ್ನೂ ಸಹ ಅಲ್ಲಿ ಹಾಕಿರುವುದರಿಂದ, ಅಲ್ಲದೆ ಯಾವ ಸೊಸೈಟಿಗಳಿಗೆ ಸರ್ಕಾರದ ಹಣ ಹಾಕಿರುತ್ತೋವೋ ಆ ಒಂದು ಸೊಸೈಟಿಯ ಭದ್ರತೆಯನ್ನು ನೋಡಿಕೊಳ್ಳುವುದಕ್ಕೆ ನಾವು ನಾಮಕರಣ ಮಾಡುತ್ತೇವೆ ಅಷ್ಟೆ.

Abolition of Professional Tax in the State.

549 SRI P. RAMDEV (Malleswaram)—Will the Minister for finance and Tourism, be pleased to state·—

(a) whether representations have been received from various associations and institutions of the State for removal of the Professional Tax in the State.

(b) if so the action taken by Government in this behalf ?

SRI M. VEERAPPA MOILY (Minister for Finance and Tourism).—

(a) Received.

(b) Government may not agree for the removal of professional tax. But under section 29 of the professional Tax Act, the representation received for showing concession from the payment of professional tax have been thoroughly examined and decisions have been taken from time to time.

ಶ್ರೀ ಪಿ. ರಾಮದೇವ್.—ಸ್ವಾಮಿ, ಈ ವೃತ್ತಿ ತೆರಿಗೆಯಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹಣ ಬರುತ್ತಾ ಇದೆ ? ಮತ್ತು ಇದರಲ್ಲಿ ರಿಜಿಸ್ಟರ್ ಮಾಡಿಕೊಡಿರತಕ್ಕಂಥ ಟ್ಯಾಕ್ಸ್ ಪೇಯರ್ಸ್‌ರಲ್ಲಿ ಸ್ಯಾಲರಿ ಕ್ಲಾಸ್‌ನವರು ಎಷ್ಟು ಜನ ಇದ್ದಾರೆ ಮತ್ತು ನಾನ್‌ಸ್ಯಾಲರಿ ಕ್ಲಾಸ್‌ನವರು ಎಷ್ಟು ಜನ ಇದ್ದಾರೆ ಎಂಬುದನ್ನು ಹೇಳುತ್ತಿರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ವರ್ಷಕ್ಕೆ ಇದರಿಂದ ಬರತಕ್ಕಂಥ ಆದಾಯ ಸುಮಾರು ೬.೨೦ ಕೋಟಿ ರೂಪಾಯಿಗಳು. Number of persons who are registered. ಈ ಬಗ್ಗೆ ನನ್ನ ಹತ್ತಿರ ವಿವರ ಇಲ್ಲ. ಇದಕ್ಕೆ ನೀವು ಪ್ರತ್ಯೇಕ ಪ್ರಶ್ನೆ ಕೇಳಬೇಕು.

ಶ್ರೀ ಪಿ. ರಾಮನೇವ್.—ಈ ವೃತ್ತಿ ತೆರಿಗೆಯನ್ನು ರದ್ದು ಮಾಡುವ ಬಗ್ಗೆ ಅನೇಕ ಸಂಘ ಸಂಸ್ಥೆ ಗಳಿಂದ ಮನವಿಗಳು ಬಂದಿವೆ ಎಂದು ತಾವು ಹೇಳಿದ್ದೀರಿ. ಯಾವ ಯಾವ ಸಂಘ ಸಂಸ್ಥೆಗಳಿಂದ ಆ ರೀತಿಯ ಮನವಿಗಳು ಬಂದಿವೆ ಎಂಬುದನ್ನು ಹೇಳಿ. ಮತ್ತೆ ಇಲ್ಲಿ ಪ್ರೊಫೆಷನಲ್ ಟ್ಯಾಕ್ಸ್ ಆಕ್ಟ್‌ನ ಸೆಕ್ಷನ್ ೨೯ರ ಪ್ರಕಾರ ಸಂಘಸಂಸ್ಥೆಗಳಿಂದ ಬಂದಂಥ ಮನವಿಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಯಾವ್ಯಾವ ಮನವಿಗಳು ಬಂದಿದೆ ಮತ್ತು ತಾವು ಏನು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?